ದಿಃ19.04.2024ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ. ಎಸ್.ಎನ್.ಜಿ., ವಕೀಲರಿಂದಃ

1. ಚಾಸಾ.1ರಿಂದ 3, 10, 12 ಮತ್ತು 13 ನನಗೆ ಸಂಬಂಧಿಕರಾಗಿರುವುದಿಲ್ಲ, ಆದರೆ ಅವರು ನಮ್ಮ ನೆರೆ-ಹೊರೆಯವರು ಮಾತ್ರ.

2. ನನ್ನ ಹೆಂಡತಿಯ ಹೆಸರು ಗೌರಮ್ಮ.

3. ಸರ್ವೆ ನಂಬರ್ 56/2ರಲ್ಲಿ ಸರ್ಕಾರದವರು 1 ಎಕರೆ 6 ಗುಂಟೆಯಷ್ಟು ಭೂಸ್ವಾಧೀನ ಮಾಡಿಕೊಂಡಿರುತ್ತಾರೆ ಎನ್ನುವುದು ಸರಿ.

4. ಸದರಿ ಜಮೀನಿನ ಪಕ್ಕದಲ್ಲಿಯೇ ಆರೋಪಿತರ ತಾಯಿಗೆ ಸಂಬಂಧಿಸಿದ 1 ಎಕರೆ 18 ಗುಂಟೆ ಜಮೀನು ಸರ್ವೆ ನಂಬರ್ 56/1ರಲ್ಲಿ ಇರುತ್ತದೆ ಎನ್ನುವುದು ಸರಿ.

5. ಸದರಿ ಭೂಸ್ವಾಧೀನವಾದ ಜಮೀನಿನಲ್ಲಿ ಸೈಟು ಮಂಜೂರು ಮಾಡಿರುವುದರ ಕುರಿತು ನನ್ನ ಹೆಂಡತಿಯಾದ ಗೌರಮ್ಮ ಇವಳ ಹೆಸರಿನಲ್ಲಿ ಯಾವುದೇ ಹಕ್ಕುಪತ್ರ ನೀಡಿರುವುದಿಲ್ಲ.

6. ಸೈಟಿನ ವಿಸ್ತೀರ್ಣವೂ ಸಹ ಎಷ್ಟು ಇರುತ್ತದೆ ಎಂಬುದು ನನಗೆ ಗೊತ್ತಿರುವುದಿಲ್ಲ ಎನ್ನುವುದು ಸರಿ.

7. ಆರೋಪಿತರ ತಾಯಿಗೆ ಸಂಬಂಧಿಸಿದ ಸದರಿ ಜಮೀನನ್ನು ಅಳತೆ ಮಾಡಿಸಿರುತ್ತಾರೆ ಎನ್ನುವುದು ಸರಿ.

8. ಸದರಿ ಆರೋಪಿತರ ತಾಯಿಗೆ ಸಂಬಂಧಿಸಿದ ಜಮೀನಿನಲ್ಲಿ ಚಾಸಾ.1, ನಾವು, ಮಂಗಳಮ್ಮ ಮತ್ತು ಚನ್ನಮ್ಮ ಇವರು ಅತಿಕ್ರಮಣ ಮಾಡಿ ವಾಸ ಮಾಡುತ್ತಿರುತ್ತೇವೆ ಎಂದು ಸದರಿ ಅಳತೆಯ ವರದಿಯಲ್ಲಿ ಬಂದಿರುತ್ತದೆ ಎನ್ನುವುದು ಸರಿಯಲ್ಲ.

9. ಸದರಿ ಅತಿಕ್ರಮಣದ ವಿಚಾರ ಗೊತ್ತಾದ ಮೇಲೆ ನಾವು ಗುಂಪುಗಾರಿಕೆಯನ್ನು ಕಟ್ಟಿಕೊಂಡು, ಚಾಸಾ.1 ಇವಳ ಮುಖಾಂತರ ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ದೂರನ್ನು ಕೊಡಿಸಿರುತ್ತೇವೆ ಎನ್ನುವುದು ಸರಿಯಲ್ಲ.

10. ಈಗ ಸುಮಾರು 10 ತಿಂಗಳುಗಳ ಹಿಂದೆ ಒಂದು ದಿನ, ಚಾಸಾ.1 ಇವಳಿಗೆ ಸಂಬಂಧಿಸಿದಂತೆ ಇರುವ ಆರೋಪಿತರ ಜಮೀನಿನ ಪಕ್ಕದಲ್ಲಿ ಒಂದು ಸೈಟಿನಲ್ಲಿ ಮಧ್ಯಾಹ್ನ ಸುಮಾರು 2.00 ಗಂಟೆ ಸಮಯದಲ್ಲಿ ಸ್ವಚ್ಛಗೊಳಿಸಲು ಹೋಗಿದ್ದಾಗ, ಆರೋಪಿತರು ಅಲ್ಲಿಗೆ ಬಂದು ಅವಳ ಜೊತೆಗೆ ಜಗಳ ಕಾಯ್ದು, ಸದರಿ ಸೈಟ್‌ನಲ್ಲಿ ಅವರಿಗೆ ಸ್ವಚ್ಛ ಮಾಡಲು ಅವಕಾಶವಿಲ್ಲ ಎಂದು ಹೇಳಿ ಸದರಿ ಸೈಟು ತಮ್ಮ ಜಮೀನಿನಲ್ಲಿ ಬರುತ್ತದೆಂದು ಆರೋಪಿತರು ತಂಟೆ ಮಾಡಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು

ಸೂಚಿಸುವುದು ಸರಿಯಲ್ಲ.

11. ಅದೂ ಅಲ್ಲದೇ ಆರೋಪಿತರು ಚಾಸಾ.1 ಇವಳಿಗೆ ಅವಾಚ್ಯ ಶಬ್ದಗಳಿಂದ ಹೊಲತಿ ಎಂದು ಜಾತಿ ನಿಂದನೆ ಸಹ ಮಾಡಿ ಪ್ರಾಣದ ಬೆದರಿಕೆಯನ್ನೂ ಸಹ ಹಾಕಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

12. ಆ ಸಮಯದಲ್ಲಿ ಚಾಸಾ.2, 3, 10, 12, 13 ಮತ್ತು ನಾನು ಜಗಳವನ್ನು ನೋಡಿ ಬಿಡಿಸಿಕೊಂಡಿರುತ್ತೇವೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

13. ಚಾಸಾ.1 ಇವಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.